ಸುಮಾರು 10 ಸಾವಿರ ಜನರಿಗೆ, ಎರಡೂವರೆ ಸಾವಿರ ಮನೆಗಳು ನಿವೇಶನಗಳು ಲಭ್ಯವಾಗಲಿಲ್ಲ. ಯಾವುದೇ ಮನೆ ನಂಬರುಗಳನ್ನು ಕೊಟ್ಟಿರಲಿಲ್ಲ. ಹಕ್ಕುಪತ್ರ ಕೂಡ ಸಿಕ್ಕಿರಲಿಲ್ಲ. ನಾನು ರಾಜ್ಯ ಸರ್ಕಾರದವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಬಡ ಮೀನುಗಾರರೇ ಹೆಚ್ಚಾಗಿರುವಂಥ ಆ ಪ್ರದೇಶದ ಜನರಿಗೆ, ಈಗ ಕಂದಾಯ ಗ್ರಾಮವೆಂದು ಘೋಷಣೆ ಮಾಡಿದ ನಂತರ ಎಲ್ಲರಿಗೂ ಮನೆ ನಿವೇಶನವನ್ನು ಕೊಡಬೇಕು ಹಕ್ಕು ಪತ್ರ ಕೊಡಬೇಕು. ಅಥವಾ ಅವರಿಗೆ ರೇಷನ್ ಕಾರ್ಡ್ ಸಿಗುವಂಥಾದ್ದು ಮತ್ತು ಬೇರೆ ನಾಗರೀಕ ಸೌಲಭ್ಯಗಳು ಸಿಗುವ ಬಗ್ಗೆ ತಾವು ಹೆಚ್ಚು ಒತ್ತುಕೊಟ್ಟು ಕ್ಷಿಪ್ರಗತಿಯಲ್ಲಿ ಜಾರಿಗೆ ತರಬೇಕು. ಮಂಗಳೂರು ಮಹಾನಗರಪಾಲಿಕೆಯಲ್ಲಿ 1995ರಲ್ಲಿ ಮನೆ ನಿವೇಶನಕ್ಕೋಸ್ಕರ ಬಹಳಷ್ಟು ಜನ ಅರ್ಜಿ ಹಾಕಿದ್ದಾರೆ. ಇಷ್ಟರವರೆಗೆ ಅವರಿಗೆ ಮನೆ ನಿವೇಶನ ಲಭ್ಯವಾಗಲಿಲ್ಲ. ಅರ್ಜಿಯ ಜೊತೆ ಕೊಡಬೇಕಾದ ಎಲ್ಲಾ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಆಶ್ರಯ ಮತ್ತು ಅಂಬೇಡ್ಕರ್ ಮನೆಗಳು ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬಂದ ಅರ್ಜಿಗಳು ವಿಲೇವಾರಿ ಆಗಲಿಲ್ಲ. ದಯವಿಟ್ಟು ಬೆಂಗೆರೆ ಗ್ರಾಮದ ನಿವಾಸಿಗಳಿಗೆ ಮತ್ತು ಮಂಗಳೂರು ಮಹಾನಗರಪಾಲಿಕೆಯಲ್ಲಿ ಉಳಿದಂಥ ಈ ಅರ್ಜಿದಾರರಿಗೆಲ್ಲಾ ಕ್ಷಿಪ್ರಗತಿಯಲ್ಲಿ ಹಕ್ಕುಪತ್ರ ಮತ್ತು ಆಶ್ರಯ ಮತ್ತು ಅಂಬೇಡ್ಕರ್ ಮನೆಗಳ ಜೊತೆಗೆ ಮನೆ ನಿವೇಶನಗಳನ್ನು ಕೊಡಬೇಕೆಂದು ರಾಜ್ಯಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈ ದಿವಸವೇ ಆ ಜಿಲ್ಲೆಯ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಜೊತೆ ಮಾತನಾಡಿ, ಮಧ್ಯಾಹ್ನದೊಳಗಾಗಿ ತಮಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಮೆರಿಟ್ ಸೀಟುಗಳನ್ನು ಮಾರಾಟ ಮಾಡಲು ನಿರ್ಧರಿಸುವುದು

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯ ದೇಶದಲ್ಲಿಯೇ ಒಳ್ಳೆಯ ಹೆಸರನ್ನು ಪಡೆದಿರುವ ವಿಶ್ವವಿದ್ಯಾನಿಲಯ. ಆದರೆ, ಈ ವರ್ಷದ ಶೈಕ್ಷಣಿಕ ವರ್ಷದಿಂದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾಸ್ಟರ್ ಡಿಗ್ರಿ ಕೋರ್ಸಸ್‌ನ್ನು ಮಾರಾಟಕ್ಕಿವೆ ಎಂದು ವಿಶ್ವವಿದ್ಯಾನಿಲಯ ಉಪಕುಲಪತಿಗಳು ಒಂದು ಸುತ್ತೋಲೆ ಹೊರಡಿಸಿ, ಎಲ್ಲಾ ಇಲಾಖೆಗಳಿಗೂ ಕೂಡ ಕಳುಹಿಸಿಕೊಟ್ಟಿದ್ದಾರೆ. ಜೊತೆಗೆ ಅಲ್ಲಿರುವಂಥ ಪ್ರತಿಯೊಂದು ವಿಭಾಗದಲ್ಲಿಯೂ 25 ಮಾಸ್ಟರ್ ಡಿಗ್ರಿ ಸೀಟ್ಸ್ ಇವೆ. ಅದರಲ್ಲಿ 13 ಸೀಟುಗಳು ರಿಸರ್ವೇಷನ್ ಕೋಟಾದಲ್ಲಿ ಬರುತ್ತದೆ. ಉಳಿದ ಕೇವಲ 12 ಸೀಟುಗಳು ಮೆರಿಟ್‌ಗಾಗಿ ಇರುವಂಥ ಸೀಟುಗಳು. 5 ಸೀಟುಗಳು ವ್ಯಾಪಾರಕ್ಕಾಗಿ ಇವೆ ಎನ್ನುವಂತಾದ್ದನ್ನು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೆ ಹೋಗುವುದರ ಜೊತೆಗೆ, ಇನ್ನೊಂದು ಪ್ರಮುಖವಾದುದೆಂದರೆ ಎಲ್ಲಾ ಸೀಟಿನ ಮೇಲೆ ಇನ್‌ಫ್ರಾಸ್ಟ್ರಕ್ಚರ್ ಸೆಸ್ ಕೂಡ ಹಾಕುವಂಥ ನಿರ್ಣಯವನ್ನೂ ಕೂಡ ಕೈಗೊಂಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟಿದೆಯೇ? ಈ ರೀತಿಯಲ್ಲಿ ಮಾಸ್ಟರ್ ಡಿಗ್ರಿ ಕೋರ್ಸುಗಳನ್ನು ಕೂಡ ಮಾರಾಟಕ್ಕೆ ಇಡುವಂಥ ಶೋಚನೀಯ ಪರಿಸ್ಥಿತಿ ಏತಕ್ಕೋಸ್ಕರ ಬಂದಿದೆ ಎನ್ನುವುದರ ಬಗ್ಗೆ ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾಸ್ಟರ್ ಡಿಗ್ರಿಯಾಗಲೀ ಅಥವಾ ಯಾವುದೇ ಡಿಗ್ರಿಯಾಗಲೀ ಈ ರೀತಿ ಮಾರಾಟಕ್ಕೆ ಇಡುವಂಥಾದ್ದು ಭೂಷಣವಾದುದ್ದಲ್ಲ. ಇದನ್ನು ಸರ್ಕಾರ ಒಪ್ಪಲಾರದು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ವಿಶ್ವವಿದ್ಯಾನಿಲಯದ ಕುಲಪತಿಗಳ ಜೊತೆ ಮಾತನಾಡುತ್ತಾರೆ. ಮತ್ತು ಸರಿಯಾದ ಉತ್ತರವನ್ನು ಕಳುಹಿಸಿಕೊಡುತ್ತಾರೆ. ಮತ್ತು ಸದನಕ್ಕೂ ಕೂಡ ತಿಳಿಸುತ್ತಾರೆ.

ಪಿ.ಯು.ಸಿ. ವಿದ್ಯಾರ್ಥಿಗಳ ಮೌಲ್ಯಮಾಪನ ಸರಿಯಾದ ಸಮಯಕ್ಕೆ ನಡೆಯದೆ ಇರುವುದುದರಿಂದ ವಿದ್ಯಾರ್ಥಿಗಳಿಗೆ ತೊಂದರೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಲಕ್ಷಾಂತರ ಮಂದಿ ಪಿ.ಯು.ಸಿ ವಿದ್ಯಾರ್ಥಿಗಳ ಮೌಲ್ಯಮಾಪನವೇ ಆಗಿಲ್ಲ. ಮುಷ್ಕರ ನಡೆಯುತ್ತಾ ಇದೆ. 1995ನೇ ಇಸವಿಯಲ್ಲಿ ಮುಷ್ಕರ ಮಾಡಿದಾಗಲೇ ಮಾತುಕತೆ ಮಾಡಿ, ಇನ್ನು ಮೂರು ತಿಂಗಳಲ್ಲೇ ಪರಿಹಾರ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ, ಅವತ್ತಿನಿಂದ, ಇವತ್ತಿನವರೆಗೂ ಮಾತುಕತೆ ನಡೆದಿಲ್ಲ. ಅಧ್ಯಾಪಕರಿಗೂ ಮತ್ತು ಸರ್ಕಾರಕ್ಕೂ ನಡೆಯುತ್ತಿರತಕ್ಕ ಗೊಂದಲದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ತುಂಬಾ ನೋವನ್ನು ಅನುಭವಿಸುತ್ತಿದ್ದಾರೆ. ಅವರ ಮೆಡಿಕಲ್‌ಗೆ, ಇಂಜಿನಿಯರಿಂಗ್‌ಗೆ ಮತ್ತು ಅವರ ಭವಿಷ್ಯದ ಬಗ್ಗೆಯೇ ಒಂದು ರೀತಿ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂಬ ಭಾವನೆ ಇವತ್ತು ಇಡೀ ರಾಜ್ಯದಲ್ಲಿ ಜನತೆಯ ಮುಂದೆ ಇದೆ. ನೀವು ಅವರನ್ನು ಮಾತುಕತೆಗೆ ಕರೆಸಿ, ಸ್ವಾಭಾವಿಕವಾಗಿ ಅವರ ಏನು ಕೆಲವು ಸಮಸ್ಯೆಗಳು ಇವೆ ಅವುಗಳನ್ನು ನಿವಾರಿಸಿ. ಉದಾಹರಣೆಗೆ ಅಧ್ಯಕ್ಷರೇ, ನಿವೃತ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಿ ನೌಕರರಿಗೆ 15 ವರ್ಷ ಕೊಡುತ್ತಾರೆ ಖಾಸಗಿ ಶಿಕ್ಷಕರಿಗೆ 20 ವರ್ಷ ಕೊಡುತ್ತಾರೆ. ಇದರಲ್ಲಿ ಸ್ವಲ್ಪ ತಾರತಮ್ಯ ಇದೆ. ಈ ಸಮಸ್ಯೆಯನ್ನು ನಿವಾರಣೆ ಮಾಡಬೇಕೆನ್ನುವುದು ಅವರ ಒಂದು ಬೇಡಿಕೆ. ಮೆಡಿಕಲ್ ಬೆನಿಫಿಟ್ ಅಷ್ಟೇ ಅವರು ತಿಂಗಳಿಗೆ 25 ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇದು ಸರ್ಕಾರಕ್ಕೆ ಒಂದು ದೊಡ್ಡ ಸಮಸ್ಯೆ ಎಂದು ನನಗೆ ಅನ್ನಿಸುವುದಿಲ್ಲ. ಅದೇ ರೀತಿ ಈ ಸರ್ಕಾರಿ ಆಜ್ಞೆಗಳನ್ನು ಹೊರಡಿಸಬೇಕಾದರೆ ಪ್ರೈವೇಟ್ ಕಾಲೇಜಿನವರಿಗೆ ಬೇರೆ ಖಾಸಗಿಯವರಿಗೆ ಬೇರೆ ಸರ್ಕಾರಿ ಶಿಕ್ಷಕರಿಗೆ ಬೇರೆ. ಇದು ಪ್ರೈವೇಟ್‌ನವರಿಗೂ ಮಾತ್ರ ಅನ್ವಯಿಸಬೇಕು ಎನ್ನುವ ರೀತಿ ಇದ್ದರೆ ಮಾತ್ರ ಅದು ಉಪಯೋಗವಾಗುತ್ತದೆ ಇಲ್ಲದಿದ್ದರೆ ಇಲ್ಲ. ಇದರಲ್ಲಿ ತಾರತಮ್ಯ ನಡೆಸುವಂತಹ ಪ್ರಯತ್ನ ನಡೆಯುತ್ತಿದೆ. ಈಗ ಇದರಿಂದ ಹಿಂಸೆ ಅನುಭವಿಸುತ್ತಿರುವುದು ವಿದ್ಯಾರ್ಥಿಗಳು ಮತ್ತು ಅವರ ತಂದೆತಾಯಿಗಳು. ಸರ್ಕಾರ ಏಕೆ ಈ ವಿಷಯದಲ್ಲಿ ಇಷ್ಟೊಂದು ಹಠಮಾರಿತನ ಮಾಡುತ್ತಿದೆಯೋ ಗೊತ್ತಾಗುತ್ತಿಲ್ಲ. ತಾವು 1995ನೇ ಇಸವಿಯಲ್ಲಿಯೇ ಹೇಳಿದ್ದಿರಿ ಅವರನ್ನು 3 ತಿಂಗಳಲ್ಲಿ ಕರೆಸಿ ಮಾತುಕತೆ ಮಾಡಿ ಮುಗಿಸುತ್ತೇವೆ ಎಂದು ತಾವು ಈಗ ಅವರನ್ನು ಮಾತುಕತೆಗೆ ಕರೆದು ಮುಗಿಸಿದರೆ ಮುಂದೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ತಕ್ಷಣ ಸರ್ಕಾರ ಅವರನ್ನು ಮಾತುಕತೆಗೆ ಕರೆಯಬೇಕು. ಈ ಒಂದು ವಿಧಾನ ಸಭೆಯ ಮೂಲಕ ಶಿಕ್ಷಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಅವರ ತಂದೆ